ದಿನಾಂಕ: 16.10.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ ಜೆ ಆರ್ ವಕೀಲರಿಂದಃ**

ವಾದಿಗಳು ನನಗೆ ಗೊತ್ತು. ವಾದಿಗಳು ಏನು ದಾವೆ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇವೆ. ಭಾಗ ಕೋರಿ ದಾವೆ ಸಲ್ಲಿಸಿದ್ದಾರೆ. ವಾದ ಪತ್ರದಲ್ಲಿ ಬರೆದಿರುವ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಚಿಕ್ಕಣ್ಣ ಸಲ್ಲಿಸಿದ ಪ್ರತಿವಾದ ಪತ್ರದ ಅಂಶಗಳನ್ನು ನಾನು ತಿಳಿದುಕೊಂಡಿದ್ದೇನೆ. ನಿಡಿ-85 ರಲ್ಲಿರುವ ಸಹಿ ನನ್ನದಾಗಿರುತ್ತದೆ. ವಂಶವಕ್ಷವನ್ನು ನಾನು ತಹಶೀಲ್ದಾರರಿಂದ ಪಡೆದುಕೊಂಡಿಲ್ಲ ಎಂದರೆ ನಿಜ. ವಂಶವೃಕ್ಷದಲ್ಲಿ ನಮೂದಿಸಿದ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

ಪ್ರತಿವಾದ ಪತ್ರದಲ್ಲಿರುವ ಸಹಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಚಿಕ್ಕಣನದಾಗಿರುತ್ತದೆ ಚಿಕ್ಕಣ್ಣ ಎಂಬ ಸಹಿ ನನ್ನ ದೊಡ್ಡಪ್ಪನಾಗಿದ್ದು ಮಹಲಿಂಗಪ್ಪ ಎನ್ನುವ ಸಹಿ ನನ್ನ ತಂದೆಯದಾಗಿರುತ್ತದೆ. ನನ್ನ ತಂದೆ ಇಂಗ್ಲಿಷ್ ನಲ್ಲಿ ಸಹಿ ಮಾಡಿರುತ್ತಾರೆ ಎಂದರೆ ನಿಜ. ನನ್ನ ತಂದೆಗೆ ಪಟೇಲ್ ಚಿಕ್ಕೇಗೌಡ ರವರ ಕುಟುಂಬದ ವಿಚಾರಗಳು ಗೊತ್ತಿರುತ್ತದೆ ಎಂದರೆ ನಿಜ. ಅವರು ಬಂದು ನ್ಯಾಯಾಲಯದಲ್ಲಿ ವಿಚಾರ ಹೇಳಲು ತೊಂದರೆ ಇಲ್ಲ. ಪ್ರತಿವಾದ ಪತ್ರದ 4 ನೇ ಪ್ಯಾರದಲ್ಲಿ ಹೇಳಿದ ಕುಟುಂಬದ ವಿಚಾರಗಳು ಸರಿಯಾಗಿರುತ್ತದೆ.

ಗ್ರಾಮದಲ್ಲಿ ನೌಕರಿ ಕೆಲಸ ಮಾಡಿದರೆ ಪಟೇಲ್ ಎಂಬ ಹೆಸರು ಬರುತ್ತದೆ ಎಂದರೆ ನಿಜ. ಸರ್ಕಾರದ ಪರವಾಗಿ ತಹಶೀಲ್ದಾರ್ ರವರು ಪಟೇಲ್ ಕುಟುಂಬದವರಿಗೆ ಇನಾಮು ಕೊಡುತ್ತಾರೆ ಎಂದರೆ ನಿಜ. ಪಟೇಲ್ ಚಿಕ್ಕೇಗೌಡನ ಪೌತಿ ನಂತರ ಸಿ ಪಾತಯ್ಯ ಎನ್ನುವವರು ಪಟೇಲ್ ಕೆಲಸವನ್ನು ಮಾಡಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳು ಇವೆ. ಸಣ್ಣಪಾತಯ್ಯನ ಮಗ ಪಾತೇಗೌಡ ರವರು ಪಟೇಲ್ ಚಿಕ್ಕೆ ಗೌಡನ ನಂತರ ಪಾಟೇಲ್ ಕೆಲಸ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಿಕ್ಕೇಗೌಡನ ಮಗ ಸಿ ಪಾತಯ್ಯ ಪಟೇಲ್ ಕೆಲಸ ಮಾಡಿದ್ದರು

ಎಂದು ನುಡಿಯುತ್ತಾರೆ. 1 ನೇ ವಾದಿಯ ಗಂಡ ಪಾತೇಗೌಡ ಅವರ ತಂದೆ ಸಣ್ಣ ಪಾತೇಗೌಡನ ನಂತರ ಪಟೇಲ್ ಕೆಲಸ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ-85 ರಲ್ಲಿ ವಾದಿಗಳ ಹೆಸರು ಇದೆ ಎಂದರೆ ನಿಜ. ವಾದಿಗಳ ಮೂಲಸ್ಥರ ಹೆಸರು ಸಹ ನಿಡಿ-85 ರಲ್ಲಿ ಇದೆ ಎಂದರೆ ನಿಜ. ನಿಡಿ-85 ರಲ್ಲಿ ವಾದಿಗಳು ಎಲ್ಲಾದರೂ ಬೇರೆ ವಾಸ ಎಂದು ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ವಂಶವೃಕ್ಷದ ಬಗ್ಗೆ ನಾನು ಬರೆಸಿದ್ದೇನೆ ಎಂದು ನುಡಿಯುತ್ತಾರೆ.

ಪಟೇಲ್ ಚಿಕ್ಕೆಗೌಡನಿಗೆ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸಣ್ಣಪ್ಪನಿಗೆ ಇಬ್ಬರು ಮಕ್ಕಳು ಎಂದು ನುಡಿಯುತ್ತಾರೆ. ಅವರ ಹೆಸರು ಸಣ್ಣ ಪಾತೇಗೌಡ ಮತ್ತು ಚಿಕ್ಕೇಗೌಡ. ಸಣ್ಣ ಪಾತೇಗೌಡ ಮತ್ತು ಚಿಕ್ಕೇಗೌಡ ಇವರ ವಂಶವೃಕ್ಷದಲ್ಲಿ ಅವರ ವಿಳಾಸ ಬೇರೆ ಬೇರೆ ಎಂದು ಬರೆಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅವರಿಗೂ ನಮಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಪಟೇಲ್ ಚಿಕ್ಕೇಗೌಡ ಮತ್ತು ಆತನ ಹೆಂಡತಿ ತಿಮ್ಮಕ್ಕನಿಗೆ ಸಣ್ಣಜ್ಜ ಯಾನೆ ಸಣ್ಣೇಗೌಡ ಮತ್ತು ಚಿಕ್ಕೇಗೌಡ ಎಂಬ ಮಕ್ಕಳು ಎಂದು ಬರೆಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ವಂಶದ ಪ್ರಕಾರ ಬರೆಸಿದ್ದಾರೆ ಎಂದು ನುಡಿಯುತ್ತಾರೆ.

**<u>ಮುಂದುವರೆದ ಪಾಟೀ ಸವಾಲೀಗೆ ವಾದಿಗಳ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು